ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು
ವಿಶೇಷ ಆರಕ್ಷಕ ದಳದ ನೇಮಕಾತಿ

೨೬೪. ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಪ್ರತೀಯ ಗಲಭೆ ಸಂದರ್ಭದಲ್ಲಿ ಜಿಲ್ಲಾ ಮಟ್ಟದಲ್ಲಿ ವಿಶೇಷ ಪೊಲೀಸ್ ದಳವನ್ನು ಆಲೋಚಿಸಿರುವುದೇ ?

(ಆ) ಹಾಗಿದ್ದಲ್ಲಿ, ರಾಷ್ಟ್ರೀಯ ಸಂಘಟನಾ ಪರಿಷತ್ತಿನ ತೀರ್ಮಾನದ ಪ್ರಕಾರ ಅಲ್ಪಸಂಖ್ಯಾತರು ಶೇಕಡಾ ೪೦ರಷ್ಟು ಪ್ರಾತಿನಿಧ್ಯ ಹೊಂದಿರುವರೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು).— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಗೋಣೀಬೀಡು ಮೂಡಲದಲ್ಲಿ ಶಾಲೆ ಕಟ್ಟಿ ಶಾಲೆ ನಡೆಸದಿರುವ ಬಗ್ಗೆ

೨೨ ಶ್ರೀಮತಿ ಮೋಟಮ್ಮ (ಮೂಡಿಗೆರೆ).— ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

(ಅ) ಮೂಡಿಗೆರೆ ತಾಲ್ಲೂಕಿನ ಕಂಬರಗೂಡು ಗ್ರಾಮ, ಗೋಣೀಬೀಡು ಮೂಡಲದಲ್ಲಿ ಪ್ರೈಮರಿ ಶಾಲೆ ಕಟ್ಟಿಡ ಹಾಗೂ ಕಪ್ಪು ಹಲಗೆ ಯೋಜನೆ ಅಡಿಯಲ್ಲಿ ಶಾಲೆ ಕಟ್ಟಿಡ ಕಟ್ಟಿ, ಶಾಲೆ ನಡೆಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

(ಇ) ಮೂಡಿಗೆರೆ ತಾಲ್ಲೂಕಿನಲ್ಲಿ ಕಟ್ಟಿಡಗಳ ಅಗತ್ಯ ಇರುವ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

(ಅ) ಬಂದಿದೆ.

(ಆ) ಕಟ್ಟಿಡ ನಿರ್ಮಾಣ ಕಾರ್ಯ ಮುಗಿದು, ಇನ್ನೂ ಅವುಗಳನ್ನು ಇಲಾಖೆಯ ವಶಕ್ಕೆ ಪಡೆಸಿಕೊಟ್ಟಿರುವುದಿಲ್ಲ. ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗವನ್ನು ಸದರಿ ಕಟ್ಟಿಡವನ್ನು ಇಲಾಖೆಯ ವಶಕ್ಕೆ ಬಿಟ್ಟುಕೊಡುವಂತೆ ಕೋರಲಾಗಿದೆ. ಶಿಕ್ಷಣ ಇಲಾಖೆಯು ವಶಕ್ಕೆ ಬಿಟ್ಟುಕೊಟ್ಟಿ ತಕ್ಷಣ ಶಾಲೆಯನ್ನು ಈ ಕಟ್ಟಿಡದಲ್ಲಿ ನಡೆಸಲು ಆರಂಭಿಸಲಾಗುವುದು.

(ಇ) ಮೂಡಿಗೆರೆ ತಾಲ್ಲೂಕಿನಲ್ಲಿ ಪ್ರಸ್ತುತ ಬಾಡಿಗೆ ಕಟ್ಟಿಡಗಳಲ್ಲಿ ನಡೆಯುತ್ತಿರುವ ೨ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಿಡಗಳ ಅವಶ್ಯಕತೆ ಇದೆ. ಹಾಗೂ ೫೫ ಶಾಲೆಗಳಿಗೆ ೧೩೨ ಹೆಚ್ಚುವರಿ ಶಾಲಾ ಕೊಠಡಿಗಳ ಅಗತ್ಯವಿದೆ.

ಬಿ.ಡಿ.ಎ. ಬಡಾವಣೆಗಳಲ್ಲಿ ಪ್ಲಾಸ್ಟಿಕ್ ಪೈಪುಗಳಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವ ಬಡಾವಣೆಗಳ ಸಂಖ್ಯೆ

೨೬೫. ಶ್ರೀ ರಾಮಲಿಂಗ ರೆಡ್ಡಿ (ಜಯನಗರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಪ್ಲಾಸ್ಟಿಕ್ ಪೈಪುಗಳ ಮುಖೇನ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವ ಬಡಾವಣೆಗಳ ಸಂಖ್ಯೆಯೆಷ್ಟು ? ಹಾಗೂ ಅವು ಯಾವುವು?